


# ಬ್ರಹ್ಮಗಂಟು ತಪ್ಪಿಸ್ಕೋಕೆ ಆಗುತ್ತಾ?

ಬ್ರಹ್ಮಗಂಟು, ಬ್ರಹ್ಮಲಿಖಿತ, ಹಣೆಬರಹ... ಮುಂತಾದವು ನಮ್ಮ ನಮ್ಮ ಅನುಕೂಲಕ್ಕೆ ಉಪಯೋಗಿಸುವಂತಹ ಪದಗಳು. ಒಮ್ಮೆ ವಾಸ್ತವ ವಿಚಾರವನ್ನು ತಿಳಿದುಕೊಂಡಿದ್ದೇ ಆದಲ್ಲಿ ಈ ಮೂಢನಂಬಿಕೆಯನ್ನು ಹೋಗಲಾಡಿಸ ಬಹುದು.

■ ಎಸ್.ತಾರಾನಾಥ್ ಭದ್ರಾವತಿ

ಗೆಳೆಯ ಶಂಕರ ಹಾಗೂ ನಾನು ಯಾವುದೋ ಒಂದು ಮುಖ್ಯ ಕೆಲಸದ ಮೇಲೆ ಎಲ್ಲಿಗೋ ಹೋಗಬೇಕಾಗಿತ್ತು. ಪುಣ್ಯಾತ್ಮ ಬೆಳಗ್ಗೆ 10 ಗಂಟೆಗೆ ಬರುತ್ತೇನೆ ಅಂದೋನು ಸುಮಾರು 11.00ಕ್ಕೆ ಬಂದ. ಯಾಕೆ ಲೇಟು ಅಂತ ಕೇಳಿದ್ರೆ ಅಯ್ಯೋ ಸಾರ್... ಬೆಳಗ್ಗೆ ಎದ್ದು ಯಾರ ಮುಖ ನೋಡಿದ್ನೋ ಗೊತ್ತಿಲ್ಲ. ಮನೆಯಿಂದ ಹೊರಗೆ ಬರುತ್ತಿದ್ದಂತೆ ಯಾವನೋ ಬೈಕಿನಲ್ಲಿ ನನ್ನ ಭುಜಕ್ಕೆ ಗುದ್ದಿಕೊಂಡು ಹೋದ. ನಾನು ತಕ್ಷಣ ಬಿದ್ದುಬಿಟ್ಟೆ. ಶರ್ಟ್ ಹರಿದು ಹೋಗಿತ್ತು. ಹಾಗಾಗಿ ಲೇಟಾಯ್ತು ಸಾರ್... ಅಂತ ಬಂದ.

ಬೆಳಿಗ್ಗೆ ಎದ್ದು ಯಾರ ಮುಖ ನೋಡಿದ್ನೋ..! ಈ ಮಾತು ಬಹುಶಃ ನಮಗೆ ಏನಾದರೂ ಎಡವಟ್ಟಾದಾಗ, ಏನಾದರೂ ಕಳೆದುಕೊಂಡಾಗ, ಎಡವಿ ಬಿದ್ದಾಗ, ನಾಯಿ ಕಚ್ಚಿದಾಗ, ಕಚೇರಿಯಲ್ಲಿ ಬಾಸ್ ಜೊತೆ ಜಗಳವಾಡಿದಾಗ... ಹೀಗೆ ಒಂದೊಂದು ಅಹಿತಕರಕರ ಘಟನೆ ನಡೆದಾಗ ನಾವು ಹೇಳುವುದು ಒಂದೇ ಬೆಳಗ್ಗೆ ಎದ್ದು ಯಾರ ಮುಖ ನೋಡಿದ್ನೋ...!?.

ನಿಜ ಹೇಳಬೇಕೆಂದರೆ ನಾವು ಯಾರದೋ ಮುಖ ನೋಡಿದ್ರಿಂದ ಮೇಲೆ ಹೇಳಿದಂತಹ ಅವಘಡಗಳು ನಡೆಯುವುದಿಲ್ಲ. ನಮ್ಮನ್ನು ನಾವು ನಿಯಂತ್ರಣದಲ್ಲಿ ಇಟ್ಟುಕೊಳ್ಳದಿದ್ದಾಗ, ಗಮನವನ್ನು ಬೇರೆ ಕಡೆ ಹರಿಸಿದಾಗ, ಕಣ್ಣು ದೃಷ್ಟಿಯನ್ನು ಸರಿಯಾಗಿ ಹರಿಸದಿದ್ದಾಗ ಇಂತಹವುಗಳು ಸಂಭವಿಸುತ್ತವೆ. ನಮ್ಮ ತಪ್ಪನ್ನು ನಾವು ಅರಿತುಕೊಳ್ಳದೆ ಕೊಡುವ ಕಾರಣಕ್ಕೆ 'ಬೆಳಗ್ಗೆ ಎದ್ದು ಯಾರ ಮುಖ ನೋಡಿದ್ನೋ...' ಎನ್ನುವುದು.

ಬರೀ ಅಹಿತಕರ ಘಟನೆಗಳಿಗೆ ಮಾತ್ರ ನಾವು ಇಂತಹ ಪದಗಳನ್ನು ಉಪಯೋಗಿಸುವುದಿಲ್ಲ. ಬೇಕಾದರೆ ಗಮನಿಸಿ ನೋಡಿ, ಯಾರೊ ಒಬ್ಬನಿಗೆ ಗಣಪತಿ ಹಬ್ಬದ ಸಮಯದಲ್ಲಿ ಲಾಟರಿ ಟಿಕೇಟ್ ಖರೀದಿಸಿದಾಗ ಅದು ಆ ವ್ಯಕ್ತಿಗೆ ಅವನ ಟಿಕೇಟ್ ನಂಬರಿಗೆ ಡ್ರಾ ಆದಾಗ ಅವನ ಅದೃಷ್ಟ ಚೆನ್ನಾಗಿತ್ತು ಅಂತ ಜನ ಮಾಡಿಕೊಳ್ಳುತ್ತಾರೆ. ಹಾಗೆ ನೋಡಿದರೆ ಯಾವ ಅದೃಷ್ಟವೂ ಅಲ್ಲ. ಯಾರೋ ಒಬ್ಬರಿಗೆ ಡ್ರಾ ಆಗಿ ಬಹುಮಾನ ಬರಬೇಕಿತ್ತು. ಇವನಿಗೆ ಬಂತು. ಅದೃಷ್ಟ ಅನ್ನುವುದು ನಾವು ನಮ್ಮ